KARN320024382014

**2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ**

**ಸಿ.ಸಿ ಸಂಖ್ಯೆಃ 1293/2014**

**ದಿನಾಂಕ : 29ನೇ ಜೂನ್ 2026**

ಉಪಸ್ಥಿತರುಃ ಶ್ರೀ ವಿನಯ್ ವಿಠಲ್ ಕುಂದಾಪುರ್, ಬಿ.ಎ.ಎಲ್. ಎಲ್.ಎಲ್.ಬಿ

2ನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು, ಕನಕಪುರ.

**ಫಿರ್ಯಾದುದಾರರುಃ** ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆ,

**(ಸರ್ಕಾರಿ ಸಹಾಯಕ ಅಭಿಯೋಜಕರವರಿಂದ)**

**ವಿರುದ್ಧ**

**ಆರೋಪಿತ** ಃ ಕೃಷ್ಣನಾಯ್ಕ್ ಬಿನ್ ಉಮ್ಲಾನಾಯ್ಕ್,

56 ವರ್ಷ ವಯಸ್ಸು,

ವಾಸಃ ರಾಚಯನದೊಡ್ಡಿ ಗ್ರಾಮ,

ಕಸಬಾ ಹೋಬಳಿ, ಕನಕಪುರ ತಾಲ್ಲೂಕು,

ರಾಮನಗರ ಜಿಲ್ಲೆ.

**(ಶ್ರೀ ಕೆ.ವಿ.ಎಮ್. ವಕೀಲರವರಿಂದ )**

KARN320024382014

| | | |
|---|---|---|
| 1 | ಘಟನೆ ನಡೆದ ದಿನಾಂಕ | : 07.07.2014 |
| 2 | ಘಟನೆ ವರದಿ ಮಾಡಿದ ದಿನಾಂಕ | : 14.07.2014 |
| 3 | ಪಿರ್ಯಾದುದಾರರ ಹೆಸರು | : ಲಕ್ಷ್ಮಣ್‌ನಾಯ್ಕ್ |
| 4 | ವಿಚಾರಣೆ ಪ್ರಾರಂಭವಾದ ದಿನಾಂಕ | : 19.09.2022 |
| 5 | ವಿಚಾರಣೆ ಮುಕ್ತಾಯವಾದ ದಿನಾಂಕ | : 29.07.2024 |
| 6 | ಆರೋಪಿಸಲ್ಪಟ್ಟ ಅಪರಾಧಗಳು | : ಭಾರತೀಯ ದಂಡ ಸಂಹಿತೆಯ ಕಲಂ 506, 504, 326 |
| 7 | ತೀರ್ಪು ಉದ್ಘೋಷಣೆ ಮಾಡಿದ ದಿನಾಂಕ | : 29.06.2026 |
| 8 | ನ್ಯಾಯಾಧೀಶರ ಅಭಿಪ್ರಾಯ | : ಆರೋಪಿಯನ್ನು ಅಪರಾಧಗಳಿಂದ ದೋಷ ಮುಕ್ತಗೊಳಿಸಿದೆ. |

**::ತೀರ್ಪು::**

ಆರಕ್ಷಕ ಉಪ ನಿರೀಕ್ಷಕರು, ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆ, ಕನಕಪುರ ರವರು ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ 506, 504, 326 ರ ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ.

**2.** <u>**ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆ:**</u>

ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ, ದಿನಾಂಕಃ 07.07.2014 ರಂದು ಮಧ್ಯಾಹ್ನ ಸುಮಾರು 02.00 ಗಂಟೆ ಸಮಯದಲ್ಲಿ ಕನಕಪುರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು, ರಾಚಯ್ಯನದೊಡ್ಡಿ ಗ್ರಾಮದ ಚಾಸಾ-1 ರವರ ಮನೆಯ ಮುಂದೆ ಆರೋಪಿತನು, ತನ್ನ ಜಮೀನಿಗೆ ಹೋಗಲು ದಾರಿ ಬಿಡಲಿಲ್ಲ ಎಂಬ ವಿಚಾರದಲ್ಲಿ ಚಾಸಾ-1 ರವರೊಂದಿಗೆ ಜಗಳ ತೆಗೆದು ಕಬ್ಬಿಣದ ಹಾರೆಯಿಂದ ಚಾಸಾ-1 ರವರಿಗೆ ತಲೆಯ ಮೇಲೆ ಮತ್ತು ಬಲಭುಜದ ಮೇಲೆ ಹೊಡೆದು ಭಾರೀ ಗಾಯ ಹಾಗೂ ಸಾಮಾನ್ಯ ಗಾಯ ಉಂಟು ಮಾಡಿ, ಚಾಸಾ-2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಕೊಲೆ ಮಾಡುವ ಬೆದರಿಕೆಯನ್ನು ಹಾಕಿರುತ್ತಾರೆ ಎಂದು, ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ 506, 504, 326 ರ ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ.

**3.** ಆರೋಪಿಯು ಜಾಮೀನಿನ ಮೇಲೆ ಬಿಡುಗಡೆ ಆಗಿದ್ದು, ಅವರಿಗೆ ದಂಡ ಪ್ರಕ್ರಿಯ ಸಂಹಿತೆ ಕಲಂ 207ರಡಿಯಲ್ಲಿ ಅಭಿಯೋಜನೆಯ ಪರ ದಾಖಲೆಗಳನ್ನು ಒದಗಿಸಲಾಗಿರುತ್ತದೆ.

**4.** ಭಾರತೀಯ ದಂಡ ಸಂಹಿತೆಯ ಕಲಂ 506, 504, 326 ರಡಿಯಲ್ಲಿ ಅಪರಾಧಗಳಿಗೆ ದೋಷಾರೋಪಣೆಯನ್ನು ರಚಿಸಿ, ಆರೋಪಿಗೆ ಓದಿ ಹೇಳಿದ್ದು ಅವರು ಅದನ್ನು ಅಲ್ಲಗಳೆದಿದ್ದರಿಂದ ವಿಚಾರಣೆಗೆ ಮುಂದೂಡಲಾಯಿತು.

**5.** ಅಭಿಯೋಜನೆಯು ದೋಷಾರೋಪಣೆ ಪಟ್ಟಿಯ 10 ಸಾಕ್ಷಿದಾರರಲ್ಲಿ, 6 ಸಾಕ್ಷಿದಾರರನ್ನು ಪ್ರಾ.ಸಾ-1 ರಿಂದ ಪ್ರಾ.ಸಾ-6 ಎಂಬುದಾಗಿ ವಿಚಾರಣೆಗೊಳಪಡಿಸಿರುತ್ತದೆ ಹಾಗೂ ವಿಚಾರಣೆ ಮಾಡಿ ದಾಖಲೆಯನ್ನು ನಿಶಾನೆ.ಪಿ-1 ರಿಂದ ನಿಶಾನೆ.ಪಿ-4 ಎಂದು ಹಾಗೂ ಮು.ಮಾ.1 ಎಂದು ಗುರುತಿಸಿರುತ್ತಾರೆ.

**6.** ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿನ ಆರೋಪಿಯ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು. ಆರೋಪಿಯು ತಮ್ಮ ಪ್ರತಿರಕ್ಷೆಯಲ್ಲಿ ಯಾವುದೇ ಸಾಕ್ಷಿ ವಿಚಾರಣೆ ಮಾಡಿರುವುದಿಲ್ಲ ಹಾಗೂ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ.

**7.** ವಾದವನ್ನು ಆಲಿಸಲಾಯಿತು, ದಾಖಲೆಗಳನ್ನು ಪರಿಶೀಲಿಸಲಾಯಿತು.

**8.** ಅಭಿಯೋಜಕರು ಹಾಜರು ಪಡಿಸಿದ ಸಾಕ್ಷ್ಯಗಳ ಹೇಳಿಕೆಗಳನ್ನು, ನಿಶಾನೆಯಾಗಿ ಗುರುತಿಸಿಕೊಂಡಿರುವ ದಾಖಲಾತಿಗಳನ್ನು ಮತ್ತು ಉಭಯ ವಕೀಲರು ಮಂಡಿಸಿದ ವಾದ ವಿವಾದದ ಮೇರೆಗೆ ಈ ಕೆಳಕಂಡ ಅಂಶಗಳು ನನ್ನ ಗಮನಕ್ಕೆ ಬಂದಿರುತ್ತವೆ.

1. ಕನಕಪುರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು, ದಿನಾಂಕಃ 07.07.2014 ರಂದು ಸುಮಾರು ಮಧಾಹ್ನ 02.00 ಗಂಟೆ ಸಮಯದಲ್ಲಿ ರಾಚಯ್ಯನದೊಡ್ಡಿ ಗ್ರಾಮದ ಚಾಸಾ-1 ಲಕ್ಷ್ಮಣನಾಯ್ಕ ರವರ ಮನೆಯ ಮುಂದೆ ಆರೋಪಿತನು ತನ್ನ ಜಮೀನಿಗೆ ಹೋಗಲು ದಾರಿ ಬಿಡಲಿಲ್ಲ ಎಂಬ ವಿಚಾರದಲ್ಲಿ ಚಾಸಾ-1 ಲಕ್ಷ್ಮಣನಾಯ್ಕ ರವರೊಂದಿಗೆ ಜಗಳ ತೆಗೆದು ಕಬ್ಬಿಣದ ಹಾರೆಯಿಂದ ಚಾಸಾ-1 ರವರಿಗೆ ತಲೆಯ ಮೇಲೆ ಮತ್ತು ಬಲಭುಜದ ಮೇಲೆ ಹೊಡೆದು ಭಾರೀ ಗಾಯ ಹಾಗೂ ಸಾಮಾನ್ಯ ಗಾಯ ಉಂಟು ಮಾಡಿದ್ದು, ಆ ಮೂಲಕ ಭಾ.ದಂ.ಸಂಹಿತೆಯ ಕಲಂ 326 ರಡಿಯಲ್ಲಿ ಅಪರಾಧ ಮಾಡಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

2. **ಎರಡನೆಯದಾಗಿಃ** ಮೇಲೆ ಹೇಳಿದ ದಿನಾಂಕ, ಸ್ಥಳ,

ಸಮಯದಲ್ಲಿ ಆರೋಪಿಯಾದ ನೀವು ಚಾಸಾ-2 ತೊಳಚಿಬಾಯಿರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಭಾ.ದಂ.ಸಂಹಿತೆಯ ಕಲಂ 504 ರಡಿಯಲ್ಲಿ ಅಪರಾಧ ಮಾಡಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

3. **ಮೂರನೆಯದಾಗಿ:** ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಲ್ಲಿ ಆರೋಪಿಯಾದ ನೀವು ಚಾಸಾ-2 ತೊಳಚಿಬಾಯಿ ರವರಿಗೆ ಕೊಲೆ ಮಾಡುವ ಬೆದರಿಕೆಯನ್ನು ಹಾಕಿದ್ದು, ಆ ಮೂಲಕ ಭಾ.ದಂ.ಸಂಹಿತೆಯ ಕಲಂ 506 ರಡಿಯಲ್ಲಿ ಅಪರಾಧ ಮಾಡಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

4. ಯಾವ ಆದೇಶ **?**

**9.** ಈ ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯದ ಉತ್ತರ ಈ ಕೆಳಗಿನಂತಿದೆ:

**ಅಂಶ-1 : ನಕಾರಾತ್ಮಕವಾಗಿ**

**ಅಂಶ-2 : ನಕಾರಾತ್ಮಕವಾಗಿ**

**ಅಂಶ-3 : ನಕಾರಾತ್ಮಕವಾಗಿ**

KARN320024382014

**ಅಂಶ-4 : ಅಂತಿಮ ಆದೇಶ**

**<u>ಕಾರಣಗಳು</u>**

**10.** **<u>ಅಂಶ-1 ರಿಂದ 3</u>:-** ಸಂಗತಿಯ ಪುನರಾವರ್ತನೆಯನ್ನು ತಪ್ಪಿಸಲು ಹಾಗೂ ಈ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ವಿಷಯಗಳ ಸಲುವಾಗಿ ಒಟ್ಟಿಗೆ ಚರ್ಚಿಸಲಾಗಿದೆ.

ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ, ದಿನಾಂಕಃ 07.07.2014 ರಂದು ಮಧ್ಯಾಹ್ನ ಸುಮಾರು 02.00 ಗಂಟೆ ಸಮಯದಲ್ಲಿ ಕನಕಪುರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು, ರಾಚಯ್ಯನದೊಡ್ಡಿ ಗ್ರಾಮದ ಚಾಸಾ-1 ರವರ ಮನೆಯ ಮುಂದೆ ಆರೋಪಿತನು, ತನ್ನ ಜಮೀನಿಗೆ ಹೋಗಲು ದಾರಿ ಬಿಡಲಿಲ್ಲ ಎಂಬ ವಿಚಾರದಲ್ಲಿ ಚಾಸಾ-1 ರವರೊಂದಿಗೆ ಜಗಳ ತೆಗೆದು ಕಬ್ಬಿಣದ ಹಾರೆಯಿಂದ ಚಾಸಾ-1 ರವರಿಗೆ ತಲೆಯ ಮೇಲೆ ಮತ್ತು ಬಲಭುಜದ ಮೇಲೆ ಹೊಡೆದು ಭಾರೀ ಗಾಯ ಹಾಗೂ ಸಾಮಾನ್ಯ ಗಾಯ ಉಂಟು ಮಾಡಿ, ಚಾಸಾ-2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಕೊಲೆ ಮಾಡುವ ಬೆದರಿಕೆಯನ್ನು ಹಾಕಿರುತ್ತಾರೆ ಎಂದು, ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ 506, 504, 326 ರ ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ.

**11.** ಅಭಿಯೋಜನೆಯು ಪ್ರಕರಣವನ್ನು ರುಜುವಾತು ಪಡಿಸಲು ತನ್ನ ಪರವಾಗಿ 6 ಸಾಕ್ಷಿದಾರರನ್ನು ಪ್ರಾಸಾ-1 ರಿಂದ ಪ್ರಾಸಾ-6 ಎಂಬುದಾಗಿ ವಿಚಾರಣೆಗೊಳಪಡಿಸಿರುತ್ತದೆ. ಪ್ರಾಸಾ-1 ರವರು ಪಿರ್ಯಾದುದಾರರು ಹಾಗೂ ಗಾಯಾಳು ಸಾಕ್ಷಿದಾರರಾಗಿರುತ್ತಾರೆ, ಪ್ರಾಸಾ-2, ಪ್ರಾಸಾ-3, ಪ್ರಾಸಾ-5 ಪ್ರತ್ಯಕ್ಷ ಸಾಕ್ಷಿದಾರರಾಗಿರುತ್ತಾರೆ ಪ್ರಾಸಾ-4 ರವರು ಪಂಚನಾಮೆ ಸಾಕ್ಷಿದಾರರಾಗಿರುತ್ತಾರೆ ಹಾಗೂ ಪ್ರಾಸಾ-6 ರವರು ತನಿಖಾಧಿಕಾರಿಯಾಗಿರುತ್ತಾರೆ.

**12.** ಪ್ರಾ.ಸಾ-1 ಲಕ್ಷ್ಮಣ್ ನಾಯ್ಕ್ ರವರು ಪಿರ್ಯಾದುದಾರರು ಹಾಗೂ ಗಾಯಾಳು ಸಾಕ್ಷಿದಾರರಾಗಿದ್ದು, ತಮ್ಮ ಸಾಕ್ಷಿಯಲ್ಲಿ, ಆರೋಪಿತ ಗೊತ್ತು. ಚಾಸಾ-2 ನನ್ನ ಹೆಂಡತಿ. ಚಾಸಾ-2 ರಿಂದ 4 ಗೊತ್ತು. ಚಾಸಾ-5 ಗೊತ್ತಿಲ್ಲ. 35 ವರ್ಷದ ಹಿಂದೆ ಸರ್ಕಾರ ಕೊಟ್ಟಿರುವ ನಿವೇಶನದಲ್ಲಿ ಮನೆಯನ್ನು ಕಟ್ಟಿಕೊಂಡಿರುತ್ತೇವೆ. ಕೃಷ್ಣನಾಯಕ ಎನ್ನುವವರು ಅವರ ಹೊಲಕ್ಕೆ ಹೋಗಲು ದಾರಿ ವಿಚಾರಕ್ಕೆ ಜಗಳ ತೆಗೆದು ನಾವು ಹಾಕಿರುವ ಬೇಲಿಯನ್ನು ಕಿತ್ತುಹಾಕಿ ಇದು ನಿಮ್ಮ ಅಪ್ಪನದಲ್ಲ ಹಾರೆಯನ್ನು ಎತ್ತಿಕೊಂಡು ಬಂದು ನನ್ನ ತಲೆಯ ಮೇಲೆ ಹೊಡೆಯಲು ಬಂದಿರುತ್ತಾರೆ ಅದು ಆಯ ತಪ್ಪಿ ಭುಜದ ಮೇಲೆ ಬಲವಾದ ಏಟಾಗಿರುತ್ತದೆ. ಚಾಸಾ-3 ರವರು ಓಡಿ ಬಂದು

ಹಾರೆಯನ್ನು ತಡೆದಿರುತ್ತಾರೆ. ಚಾಸಾ-4 ರವರು ಸಹ ಬಂದು ಜಗಳವನ್ನು ಬಿಡಿಸಿರುತ್ತಾರೆ. ಚಾಸಾ-2 ರವರಿಗೆ ಆರೋಪಿಯು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ.

ಮುಂದುವರೆದು ಘಟನೆಯಾದ ಮಾರನೆಯ ದಿನ ಕನಕಪುರ ಗ್ರಾಮಾಂತರ ಪೋಲಿಸರು ಸ್ಥಳಕ್ಕೆ ಬಂದು ಮಹಜರ್ ಮಾಡಿ ಬೇಲಿ ಹಾಕಿಕೊಳ್ಳಿ ಎಂದು ಹೇಳಿದರು. ನಾನು ಊರಿನಲ್ಲಿ ಗ್ರಾಮಸ್ಥರನ್ನು ಪಂಚಾಯಿತಿಗೆ ಸೇರಿಸಿದ್ದೆನು ಅವರು ಆರೋಪಿಗೆ ಇನ್ನೊಂದು ದಾರಿಯನ್ನು ಬಳಸಿಕೊಳ್ಳಲು ಹೇಳಿ ಪ್ರಕರಣವನ್ನು ರಾಜಿ ಮಾಡಿ ಇತ್ಯರ್ಥ ಪಡಿಸಿಕೊಳ್ಳಿ ಎಂದು ಹೇಳಿರುತ್ತಾರೆ. ಆರೋಪಿಯು ರಾಜಿಗೆ ಬಂದಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ 35 ವರ್ಷಗಳ ಹಿಂದೆ ನಮಗೆ ಮಂಜೂರಾಗಿದ್ದ ನಿವೇಶನದ ಜಮೀನು ನಮ್ಮ ಮಾವನಾದ ತಿಮ್ಮನಾಯ್ಕನಿಗೆ ಸೇರಿತ್ತು. ಆರೋಪಿಗೆ ಅವರ ಜಮೀನಿಗೆ ಹೋಗಲು ಬೇರೆ ದಾರಿ ಇದೆ. ದಿನಾಂಕ 07.07.2014 ರಂದು ನಮ್ಮ ಮನೆಯ ಪಕ್ಕದಲ್ಲಿ ದಾರಿ ಬಿಡಬೇಕೆಂದು ನಮಗೆ ತೊಂದರೆ ಕೊಡುತ್ತಿದ್ದರು. ಆರೋಪಿಯು ಹಾರೆಯಿಂದ ತಲೆಯ ಮೇಲೆ ಹೊಡೆದು ರಕ್ತಗಾಯಪಡಿಸಿದ್ದರು. ನನ್ನ ಹೆಂಡತಿ ಚಾಸಾ-2 ರವರಿಗೆ ಅದೇ

ಹಾರೆಯಿಂದ ಹೊಡೆದು ಕೊಲೆ ಬೆದರಿಕೆ ಹಾಕಿರುತ್ತಾರೆ. ಆರೋಪಿಯು ಪಂಚಾಯಿತಿಗೆ ಬರಲು ಸಮಯಾವಕಾಶವನ್ನು ನೀಡಿದ್ದು ಅವರು ಬರದೆ ಇರುವ ಕಾರಣ ದಿನಾಂಕ 14.07.2014 ರಂದು ತಡವಾಗಿ ದೂರನ್ನು ನೀಡಿರುತ್ತೇನೆ ಎಂದರೆ ಸರಿ. ದಿನಾಂಕ 15.07.2014 ರಂದು ಪೋಲಿಸರು ಸ್ಥಳಕ್ಕೆ ಬಂದು ಮಹಜರ್ ಕ್ರಮ ಜರುಗಿಸಿ ಹಾರೆಯನ್ನು ಅಮಾನತ್ತು ಪಡಿಸಿಕೊಂಡರು. ನಂತರ ನಾನು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ,

*“... ಚಾಸಾ-2 ನನ್ನ ಹೆಂಡತಿ. ಚಾಸಾ-3 ಉಮೇಶ ನನ್ನ ಮಾವನ ಮಗ. ಚಾಸಾ-4 ನನ್ನ ಅಣ್ಣನ ಮಗ. ಚಾಸಾ-5 ನನ್ನ ಅಳಿಯ. ನಮ್ಮ ಊರು ರಾಚಳ್ಳಿ ದೊಡ್ಡಿ ಗ್ರಾಮ. ನಮ್ಮ ಗ್ರಾಮದಲ್ಲಿ 70 ವಾಸದ ಮನೆಗಳಿವೆ. ನಾವಿರುವ ಮನೆ ರಾಜ ಬೀದಿಯಲ್ಲಿದೆ. ನಮ್ಮ ಮನೆ ಅಕ್ಕ ಪಕ್ಕ ಮನೆಗಳಿವೆ. ನಮ್ಮ ಮನೆಯ ಮುಂದೆ ರಾಜ ಬೀದಿ ಇದೆ. ನನ್ನ ಮನೆಯ ಪಕ್ಕದಲ್ಲಿ ಆರೋಪಿಯ ಮಾವನಾದ ಗೋವಿಂದನಾಯ್ಕ ರವರ ಮನೆ ಇದೆ. ನಮ್ಮ ಮನೆಯ ಹಿಂಭಾಗ ಆರೋಪಿಯ ಜಮೀನು ಇದೆ. ಆರೋಪಿಯ ತಂದೆ ಹೆಸರು ಊಮ್ಲಾ ನಾಯಕ್. ಆರೋಪಿಯು ಮೂರರಿಂದ ಮೂರೂವರೆ ಎಕರೆ ವ್ಯವಸಾಯ ಮಾಡುತ್ತಾರೆ. 2 ಎಕರೆ ಅವರ ತಂದೆ ಖರೀದಿ ಮಾಡಿದ ಜಮೀನು ಅವರ ತಂದೆಯ*

*ಹೆಸರಿನಲ್ಲಿ ಇದೆ. ಉಳಿಕೆ ಜಮೀನು ಅವರ ಪಿತ್ರಾರ್ಜಿತ ಆಸ್ತಿ. ನಮ್ಮ ಮನೆಗೂ ಮತ್ತು ಗೋವಿಂದ ನಾಯಕ್ ನ ಮನೆಗೆ ಓಡಾಡಲು 11 ಅಡಿ ಜಾಗವಿರುತ್ತದೆ. ಸುಮಾರು 50 ವರ್ಷಗಳಿಂದ ಆರೋಪಿಯವರ ತಂದೆ ಅವರ ಪೂರ್ವಿಕರ ಕಾಲದಿಂದಲೂ ದಾರಿಯನ್ನು ಬಳಸುತ್ತಿದ್ದರು. 2014 ರವರೆಗೂ ನಾನು ದಾರಿಯ ವಿಚಾರದಲ್ಲಿ ಯಾವುದೇ ತೊಂದರೆ ನೀಡಿರುವುದಿಲ್ಲ. 2014 ರಿಂದೀಚೆಗೆ ನಾನು ಬೇರೆಯವರ ಮಾತು ಕೇಳಿ ಆರೋಪಿಯು ದಾರಿಯಲ್ಲಿ ಬರುವಾಗ ತಕರಾರು ಮಾಡಿರುತ್ತೇನೆ. ಸದರಿ ದಾರಿಯನ್ನು ಹೊರತು ಪಡಿಸಿ ಆರೋಪಿಗೆ ಬೇರೆ ದಾರಿ ಇರುವುದಿಲ್ಲ. ನನ್ನ ತಂದೆ ಹೆಸರು ಮೊಳ್ಳೇನಾಯಕ. ಆರೋಪಿಯ ತಂದೆ ನಮ್ಮ ತಂದೆಯ ವಿರುದ್ಧ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. 07.07.2014 ರಂದು ಘಟನೆ ನಡೆದಿರುತ್ತದೆ. ಚಾಸಾ-2 ರವರು ಘಟನೆಯ ಸಮಯದಲ್ಲಿ ಬೇರೆ ಕಡೆ ಇದ್ದರು. ಆಗ ಆರೋಪಿ ಬೇಲಿಯನ್ನು ಕೀಳುತ್ತಿದ್ದರು. ಸ್ಥಳದಲ್ಲಿ ಬೇಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಹಾರೆಯಿಂದ ತಲೆಯ ಮೇಲೆ ಹೊಡೆದಿರುತ್ತಾರೆ ಮತ್ತು ಭುಜಕ್ಕೂ ಸಹ ಏಟು ಬಿದ್ದಿರುತ್ತದೆ. ಗಲಾಟೆ ಸಮಯದಲ್ಲಿ ನಾನು ಮತ್ತು ಆರೋಪಿ ಇಬ್ಬರೇ ಇದ್ದೆವು. ಆರೋಪಿಯು ಹೊಡೆದ ನಂತರ ಚಾಸ-3 ಮತ್ತು 4 ಬಂದರು. ಆರೋಪಿಯು ಹೊಡೆದಾಗ ಚಾಸಾ-2 ರವರು ಸ್ಥಳದಲ್ಲಿ ಇರಲಿಲ್ಲ. ಆರೋಪಿಯು ನನ್ನ ಮೇಲೆ ಮಾತ್ರ ಗಲಾಟೆ ಮಾಡಿ ಹೊಡೆದಿರುತ್ತಾರೆ. ಆರೋಪಿಯು ಆ ದಿನ ಯಾವುದೇ ಗಲಾಟೆ ಮಾಡಿ ಆಯುಧದಿಂದ ಹೊಡೆದಿರುವುದಿಲ್ಲ ಎಂದರೆ ಸರಿ. ಚಾಸಾ-2 ರವರಿಗೆ ಆರೋಪಿಯು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿ. ದಾರಿಯ ವಿಚಾರದಲ್ಲಿ ವೈಷಮ್ಯ ಇರುವುದರಿಂದ ಸುಳ್ಳು ದೂರನ್ನು ನೀಡಿರುತ್ತೇನೆ ಎನ್ನುವುದನ್ನು ಅಲ್ಲಗಳೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ..."*

*"... ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸರ್ಕಾರದಿಂದ ನಮಗೆ ನಿವೇಶನ ಮಂಜೂರಾಗುವ ಮೊದಲು ಯಾರಿಗೆ ಸೇರಿತ್ತು ಎಂದು ಗೊತ್ತಿಲ್ಲ. ನಿವೇಶನವು ನನ್ನ ತಂದೆಗೆ ಸರ್ಕಾರದಿಂದ ಮಂಜೂರಾಗಿರುತ್ತದೆ. ನಮ್ಮ ತಂದೆಗೆ ಮಂಜೂರಾದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನನಗಾಗಲೀ ನನ್ನ ತಂದೆಗಾಗಲೀ ನಿವೇಶನ ಮಂಜೂರಾಗಿರುವುದಿಲ್ಲ. ಯಾವುದೇ ದಾಖಲಾತಿ ಇಲ್ಲದೇ ಆರೋಪಿಗೆ ಸೇರಿದ ದಾರಿಯನ್ನು ಒತ್ತುವರಿ ಮಾಡಿಕೊಂಡು ಮನೆಯನ್ನು ಕಟ್ಟಿಕೊಂಡಿರುತ್ತೇನೆ. ಸದರಿ ದಾರಿಯ ವಿಚಾರವಾಗಿ ನನಗೂ ಆರೋಪಿಗೂ ಆಗಾಗ ಜಗಳಗಳು ಆಗುತ್ತದೆ ಎಂದರೆ ಸರಿ. ಆರೋಪಿಯು ನನಗೆ ಯಾವುದೇ ಹಲ್ಲೆ ಮಾಡದೇ ಇದ್ದರೂ ಸಹ ನಾನು ಅವರ ಮೇಲೆ ಹಲ್ಲೆ ಮಾಡಿರುತ್ತೇನೆ. ಘಟನೆಯ ಸಂದರ್ಭದಲ್ಲಿ ನಮ್ಮ ಮನೆಯ ಮುಂದೆ ಚಪ್ಪಡಿ ಕಲ್ಲುಗಳು ಇದ್ದವು ಎಂದರೆ ಸರಿ. ನಮ್ಮ ಮನೆಯ ಮುಂದೆ ಇದ್ದಂತಹ ಚಪ್ಪಡಿ ಕಲ್ಲುಗಳ ಮೇಲೆ ಜಾರಿ ಬಿದ್ದು ತಲೆಗೆ ಏಟು ಮಾಡಿಕೊಂಡಿರುತ್ತೇನೆ, ಪೊಲೀಸರು ನಮ್ಮ ಜಾಗಕ್ಕೆ ಬೇಲಿಯನ್ನು ಹಾಕಿಕೊಳ್ಳಲು ಹೇಳಿರುತ್ತಾರೆ. ಘಟನೆಯ ಮರುದಿನ ಪೊಲೀಸರು ಬಂದು ಬೇಲಿ ಹಾಕಿಕೊಳ್ಳಲು ಹೇಳಿರುವುದಿಲ್ಲ ಎನ್ನುವುದನ್ನು ಅಲ್ಲಗಳೆದಿರುತ್ತಾರೆ. ..."*

**13.** ಪ್ರಾಸಾ-2 ತುಳಚಿಬಾಯಿ ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಆರೋಪಿಯ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ. 2014 ರಲ್ಲಿ ನನ್ನ ಅಣ್ಣ ಮತ್ತು ನನ್ನ ಗಂಡನ ಮಧ್ಯೆ ದಾರಿಯ ವಿಚಾರವಾಗಿ ಹಾರೆಯನ್ನು ಎತ್ತಿಕೊಂಡು ಬಂದು ನನ್ನ ಗಂಡ ಚಾಸಾ-1 ರವರ ತಲೆಯ

ಮೇಲೆ ಹೊಡೆದು ರಕ್ತಗಾಯವಾಗಿದ್ದು, ಚಾಸಾ-1 ನನ್ನ ಗಂಡ ಕಿರುಚಿಕೊಂಡಾಗ ಚಾಸಾ-3 ಮತ್ತು 4 ರವರು ಬಿಡಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ ಸುಮಾರು 35 ವರ್ಷಗಳ ಹಿಂದೆ ಸರ್ಕಾರದವರು ಮಂಜೂರು ಮಾಡಿದ ನಿವೇಶನದಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡಿಕೊಂಡಿದ್ದೇವೆ ಎಂದರೆ ಸರಿ. ಆರೋಪಿಯ ಜಮೀನಿಗೆ ಹೋಗಲು ದಾರಿ ಇದ್ದರೂ ಸಹ ನಮ್ಮ ಮನೆಯ ಪಕ್ಕದಲ್ಲಿ 2 ವರ್ಷಗಳಿಂದ ನಮ್ಮ ಜಮೀನಿಗೆ ಹೋಗಲು ದಾರಿ ಬಿಡಬೇಕೆಂದು ಗಲಾಟೆ ಮಾಡುತ್ತಿದ್ದರು. ದಿನಾಂಕ 07.07.2014 ರಂದು ಆರೋಪಿಯು ಚಾಸಾ-1 ರವರಿಗೆ ಜಮೀನಿಗೆ ಹೋಗಲು ಯಾಕೆ ದಾರಿ ಬಿಡುವುದಿಲ್ಲ ಎಂದು ಹಾರೆಯನ್ನು ಎತ್ತಿಕೊಂಡು ಬಂದು ತಲೆಯ ಮೇಲೆ ಮತ್ತು ಭುಜದ ಮೇಲೆ ಹೊಡೆದು ರಕ್ತಗಾಯ ಉಂಟು ಮಾಡಿದರು ಎಂದರೆ ಸರಿ. ನನಗೂ ಆರೋಪಿಯು ಅವಾಚ್ಯ ಶಬ್ದಗಳಿಂದ ಬೈದು ಇವತ್ತಲ್ಲ ನಾಳೆ ನಿಮ್ಮನ್ನು ಕೊಲೆ ಮಾಡುತ್ತೇನೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

KARN320024382014

ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ,

*"... ಚಾಸಾ-1 ನನ್ನ ಗಂಡ. ಚಾಸಾ-3 ನನ್ನ ಚಿಕ್ಕಪ್ಪನ ಮಗ. ಚಾಸಾ-4 ನನ್ನ ಮಗ. ಚಾಸಾ-5 ನನ್ನ ಅಳಿಯ. ಚಾಸಾ-6 ನನ್ನ ಸ್ವಂತ ಮಗ. ನಾನು ರಾಚಯ್ಯನದೊಡ್ಡಿಯ ವಾಸಿ. ರಾಚಯ್ಯನದೊಡ್ಡಿಯಲ್ಲಿ ಸುಮಾರು 150 ಮನೆಗಳಿವೆ. ನನ್ನ ಮನೆಯ ಮುಂಭಾಗ ರಾಜಬೀದಿ ಇದೆ. ನಮ್ಮ ಮನೆಯ ಅಕ್ಕಪಕ್ಕ ಮನೆಗಳಿರುತ್ತವೆ ಎಂದರೆ ಸರಿ. ನಮ್ಮ ಮನೆಯ ಪಕ್ಕ ಆರೋಪಿಯ ಮಾವನ ಮನೆ ಇರುತ್ತದೆ ಎಂದರೆ ಸರಿ. ನಮ್ಮ ಮನೆಯ ಹಿಂದಿನ ಜಮೀನಿನಲ್ಲಿ ಆರೋಪಿ ವ್ಯವಸಾಯ ಮಾಡುತ್ತಿದ್ದಾನೆ ಎಂದರೆ ಸರಿ. ಆರೋಪಿಯ ಜಮೀನು ಎಷ್ಟು ವಿಸ್ತೀರ್ಣ ಇದೆ ಎಂದು ಗೊತ್ತಿಲ್ಲ. ಆರೋಪಿಯ ತಂದೆಯ ಹೆಸರು ಊಮ್ಲಾ ನಾಯಕ್. ಆರೋಪಿಯು ವ್ಯವಸಾಯ ಮಾಡುವ ಜಮೀನು ಅವರ ತಂದೆ ಊಮ್ಲಾ ನಾಯಕ್ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಮ್ಮ ಮನೆಗೂ ಮತ್ತು ಆರೋಪಿಯ ಮಾವ ಗೋವಿಂದನಾಯಕ್ ಮನೆಯ ಮಧ್ಯೆ 11 ಅಡಿ ಓಡಾಡಲು ಜಾಗ ಇರುತ್ತದೆ ಎಂದರೆ ಸರಿಯಲ್ಲ. ಸುಮಾರು 50 ವರ್ಷಗಳಿಂದ 2014 ರವರೆಗೆ ಸದರಿ ಜಾಗದಲ್ಲಿ ಓಡಾಡುತ್ತಿದ್ದರು ಎಂದರೆ ಸರಿಯಲ್ಲ. 2014 ರವರೆಗೆ ಅವರು ಓಡಾಡುತ್ತಿದ್ದರೂ ಸಹ ನಾವು ಯಾವುದೇ ತೊಂದರೆ ನೀಡಿರುವುದಿಲ್ಲ ಎನ್ನುವುದನ್ನು ಅಲ್ಲಗಳೆದಿರುತ್ತಾರೆ..."*

*"... ಸಾಕ್ಷಿ ಮುಂದುವರೆದು, ತಮ್ಮ ಸಾಕ್ಷ್ಯದಲ್ಲಿ ಮೊಳೆನಾಯಕ ನಮ್ಮ ಮಾವ. ದಾರಿಯ ವಿಚಾರದಲ್ಲಿ ಆರೋಪಿಯ ತಂದೆ ಊಮ್ಲಾ ನಾಯಕ ಚಾಸಾ-1 ರವರ ವಿರುದ್ಧ ಸಿವಿಲ್*

KARN320024382014

ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಆರೋಪಿ ನನ್ನ ದೊಡ್ಡಪ್ಪನ ಮಗ. ನಮ್ಮ ಮನೆಯ ಪಕ್ಕದಲ್ಲಿರುವ ದಾರಿಯನ್ನು ಹೊರತು ಪಡಿಸಿ ಆರೋಪಿಗೆ ಜಮೀನಿಗೆ ಓಡಾಡಲು ಬೇರೆ ದಾರಿ ಇಲ್ಲ ಎಂದರೆ ಸರಿಯಲ್ಲ. ಸರ್ಕಾರದಿಂದ ನಮಗೆ ಮಂಜೂರಾದ ನಿವೇಶನದ ದಾಖಲೆಯನ್ನು ನ್ಯಾಯಾಲಯದ ಬಳಿ ಹಾಜರುಪಡಿಸಿಲ್ಲ. ನಿವೇಶನದ ವಿಸ್ತೀರ್ಣ, ಖಾನೇಷುಮಾರಿ ನಂಬರ್ ನನಗೆ ಗೊತ್ತಿಲ್ಲ. ಮೂಲತಃ ನಿವೇಶನವು ನಮ್ಮ ತಂದೆಗೆ ಸೇರಿದ್ದಾಗಿರುತ್ತದೆ. ನಿವೇಶನವು ಯಾವ ಸರ್ವೆ ನಂಬರ್ ಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಜಮೀನು ಒಂದು ಎಕರೆ ವಿಸ್ತೀರ್ಣ ಇತ್ತು. ನಮ್ಮ ತಂದೆಗೆ ನಿವೇಶನವು ಸೇರಿದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಸರ್ಕಾರವು ನಮಗೆ ನಿವೇಶನವನ್ನು ಮಂಜೂರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸರ್ಕಾರದಿಂದ ಮಂಜೂರಾಗಿದ್ದರೆ ದಾಖಲೆಯನ್ನು ನ್ಯಾಯಾಲಯ ಮುಂದೆ ಹಾಜರುಪಡಿಸುತ್ತಿದ್ದೆ, ಮಂಜುರು ಮಾಡಿಲ್ಲದ ಕಾರಣ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಅಕ್ರಮವಾಗಿ ನಿವೇಶದಲ್ಲಿ ಮನೆ ಕಟ್ಟಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ತಿಮ್ಮಾನಾಯಕನಿಗೆ ಸೇರಿದ ಯಾವುದೇ ನಿವೇಶನ, ಜಮೀನು ಇರಲಿಲ್ಲ ಎನ್ನುವುದನ್ನು ಅಲ್ಲಗಳೆದಿರುತ್ತಾರೆ.

ಯಾವ ದಿನ, ತಿಂಗಳು ಘಟನೆ ನಡೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 2014 ರಲ್ಲಿ ಘಟನೆ ನಡೆಯಿತು ಎಂದು ನುಡಿಯುತ್ತಾರೆ. ಘಟನೆಯ ಸಮಯದಲ್ಲಿ ನಾನು ಹಾಜರಿರಲಿಲ್ಲ. ನಾನು ಸ್ಥಳಕ್ಕೆ ಬಂದಾಗ ಚಾಸಾ-1 ನನ್ನ ಗಂಡನ ತಲೆಯಿಂದ ರಕ್ತ ಸುರಿಯತ್ತಾ ಇತ್ತು. ಆರೋಪಿಯು ಚಾಸಾ-1 ನನ್ನ ಗಂಡನಿಗೆ ಹೊಡೆದಾಗ ನಾನು ಇರಲ್ಲಿಲ್ಲ. ನಾನು ಬರುವಷ್ಟರಲ್ಲಿ ಹಾರೆಯು ಸ್ಥಳದಲ್ಲಿ ಬಿದ್ದಿತ್ತು. ಹಾರೆಯನ್ನು ನಮ್ಮ ಮನೆಯಲ್ಲಿ ನಾನು ಎತ್ತು ಇಟ್ಟಿದ್ದೆ. ಮಹಜರ್ ಸಮಯದಲ್ಲಿ ಹಾಜರುಪಡಿಸಿರುತ್ತೇನೆ. ನಾನು ಘಟನೆಯ ಸ್ಥಳಕ್ಕೆ

*ಹೋಗುವಷ್ಟರಲ್ಲಿ ಚಾಸಾ-3 ರವರು ಜಗಳವನ್ನು ಬಿಡಿಸುತ್ತಿದ್ದರು. ಅವರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಆರೋಪಿಯು ನನ್ನ ಗಂಡ ಚಾಸಾ-1 ರವರಿಗೆ ಹಾರೆಯಲ್ಲಿ ಹೊಡೆದು ಗಲಾಟೆ ಮಾಡಿರುವುದಿಲ್ಲ ಎನ್ನುವುದನ್ನು ಅಲ್ಲಗಳೆದಿರುತ್ತಾರೆ...."*

**14.** ಪ್ರಾಸಾ-3 ಉಮೇಶ್ ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಆರೋಪಿಯ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ. ಚಾಸಾ-1 ಮತ್ತು 2 ನಮ್ಮ ಮನೆಯ ಪಕ್ಕದವರು. ಚಾಸಾ-4 ಮತ್ತು 6 ಗೊತ್ತು. 07.07.2014 ರಂದು ನಾನು ಮತ್ತು ಕಿರಣ್/ಚಾಸಾ-4 ರವರು ರಸ್ತೆಯಲ್ಲಿ ನಿಂತುಕೊಂಡಿದ್ದಾಗ ಯಾರೋ ಕೂಗಾಡಿದ ಶಬ್ದ ಕೇಳಿ ಸ್ಥಳಕ್ಕೆ ಹೋದಾಗ ಚಾಸಾ-1 ಮತ್ತು ಆರೋಪಿಯು ಜಗಳ ಮಾಡುತ್ತಿದ್ದರು. ನಾನು ಮತ್ತು ಚಾಸಾ-4 ರವರು ಹೋಗಿ ಜಗಳವನ್ನು ಬಿಡಿಸಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ ಸುಮಾರು 35 ವರ್ಷಗಳ ಹಿಂದೆ ಸರ್ಕಾರದವರು ಮಂಜೂರು ಮಾಡಿದ ನಿವೇಶನದಲ್ಲಿ ಚಾಸಾ-1 ರವರು ಮನೆ ಕಟ್ಟಿಕೊಂಡು ವಾಸ ಮಾಡಿಕೊಂಡಿರುತ್ತಾರೆ. ಆರೋಪಿಯ ಜಮೀನಿಗೆ ಹೋಗಲು ಚಾಸಾ-1 ರವರ ಮನೆಯ ಪಕ್ಕದಲ್ಲಿ

ದಾರಿ ಬಿಡಬೇಕೆಂದು ಗಲಾಟೆ ಮಾಡುತ್ತಿದ್ದರು. ದಿನಾಂಕ 07.07.2014 ರಂದು 2.00 ಗಂಟೆ ಸಮಯದಲ್ಲಿ ಆರೋಪಿಯು ಚಾಸಾ-1 ರವರಿಗೆ ಜಮೀನಿಗೆ ಹೋಗಲು ಯಾಕೆ ದಾರಿ ಬಿಡುವುದಿಲ್ಲ ಎಂದು ಹಾರೆಯನ್ನು ಎತ್ತಿಕೊಂಡು ಬಂದು ತಲೆಯ ಮೇಲೆ ಮತ್ತು ಭುಜದ ಮೇಲೆ ಹೊಡೆದು ರಕ್ತಗಾಯ ಉಂಟುಮಾಡಿದರು. ಚಾಸಾ-2 ರವರಿಗೆ ಆರೋಪಿಯು ಅವಾಚ್ಯ ಶಬ್ದಗಳಿಂದ ಬೈದು ಇವತ್ತಲ್ಲ ನಾಳೆ ಚಾಸಾ-1 ಮತ್ತು 2 ರವರಿಗೆ ಕೊಲೆ ಮಾಡುತ್ತೇನೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ,

*"... ನಾನು ಮತ್ತು ಚಾಸಾ-4 ರವರು ಸ್ಥಳಕ್ಕೆ ಹೋಗುವ ಮುನ್ನ ಯಾರ್ಯಾರ ಮಧ್ಯೆ ಗಲಾಟೆ ಆಗಿತ್ತು ಎಂದು ನನಗೆ ಗೊತ್ತಿಲ್ಲ. ನಾನು ಕಣ್ಣಾರೆಯಾಗಿ ಆರೋಪಿಯು ಚಾಸಾ-1 ರವರಿಗೆ ಹೊಡೆದಿರುವುದನ್ನು ನೋಡಿರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ...."*

**15.** ಪ್ರಾಸಾ-4 ಮೋಹನ್ ರವರು ಪಂಚನಾಮೆ ಸಾಕ್ಷಿದಾರರಾಗಿದ್ದು, ದಿನಾಂಕ 15.07.2014 ರಂದು ಬೆಳಿಗ್ಗೆ ಸುಮಾರು 9.00 ಗಂಟೆ ಸಮಯದಲ್ಲಿ ಆರೋಪಿ ಕೃಷ್ಣನಾಯ್ಕ ನಮ್ಮ ತಂದೆಯಾದ

ಚಾಸಾ-1 ರವರಿಗೆ ಹಾರೆಯಿಂದ ತಲೆ ಮತ್ತು ಬಲಭುಜದ ಮೇಲೆ ಹೊಡೆದಿರುತ್ತಾರೆ. ನಂತರ ಆಸ್ಪತ್ರೆಗೆ ನಮ್ಮ ಊರಿನವರು ನಮ್ಮ ತಂದೆಯನ್ನು ದಾಖಲು ಮಾಡಿರುತ್ತಾರೆ. ನಂತರ ಅದೇ ದಿನ ಠಾಣೆಗೆ ಹೋಗಿ ದೂರನ್ನು ನಾನೇ ದಾಖಲಿಸಿರುತ್ತೇನೆ. 2 - 3 ದಿನಗಳ ನಂತರ ನಮ್ಮ ತಂದೆಯನ್ನು ವಿಕ್ಟೋರಿಯಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ,

*"... ಆರೋಪಿ ಮತ್ತು ನಮ್ಮ ತಂದೆ ಮಧ್ಯೆ ಗಲಾಟೆ ನಡೆದಾಗ ನಾನು ಸ್ಥಳದಲ್ಲಿ ಹಾಜರಿರಲಿಲ್ಲ. ಆರೋಪಿ ಹಾರೆಯಿಂದ ನಮ್ಮ ತಂದೆಗೆ ತಲೆಗೆ ಮತ್ತು ಭುಜಕ್ಕೆ ಹೊಡೆದಿದ್ದನ್ನು ನಾನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ನಮ್ಮ ತಂದೆಯನ್ನು ಅದೇ ದಿನ ಗಲಾಟೆಯಾದ ದಿನ ನಾನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಿಲ್ಲ. ಗಲಾಟೆಯಾದ ದಿನ ಹಾಗೂ ಬೇರೆ ದಿನ ನಾನು ನನ್ನ ತಂದೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಿಲ್ಲ ಎನ್ನುವುದನ್ನು ಅಲ್ಲಗಳೆದಿರುತ್ತಾರೆ..."*

**16.** ಪ್ರಾ.ಸಾ-5 ಕಿರಣ್ ರವರು ಪ್ರತ್ಯಕ್ಷ ಸಾಕ್ಷಿದಾರರಾಗಿರುತ್ತಾರೆ. ಸದರಿ ಸಾಕ್ಷಿಯು ತಮ್ಮ ವಿಚಾರಣೆಯಲ್ಲಿ, ಆರೋಪಿತ ಗೊತ್ತು. ಚಾಸಾ-1 ರಿಂದ ಚಾಸಾ-3, 5 ಮತ್ತು 6 ಗೊತ್ತು. ಆರೋಪಿ ಮತ್ತು ಚಾಸಾ-1 ಮತ್ತು 2 ರವರ ನಡುವೆ ಯಾವುದೇ ಗಲಾಟೆ ನಡೆದಿಲ್ಲ.

ಆರೋಪಿಯು ಚಾಸಾ-2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಚಾಸಾ-1 ರವರ ಮೇಲೆ ಕಬ್ಬಿಣದ ಹಾರೆಯಿಂದ ಯಾವುದೇ ಹಲ್ಲೆ ಮಾಡಿ ಪ್ರಾಣ ಬೆದರಿಕೆಯನ್ನು ಹಾಕಿರುವುದಿಲ್ಲ. ನಾನು ಯಾವುದೇ ಗಲಾಟೆಯನ್ನು ಕಣ್ಣಾರೆ ನೋಡಿ, ಜಗಳ ಬಿಡಿಸಿರುವುದಿಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರಿಗೆ ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದು ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದು, ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಿದರೂ ಸಹ ಅಭಿಯೋಜನೆಗೆ ಯಾವುದೇ ಅನುಕೂಲ ಆಗಿರುವುದಿಲ್ಲ.

**17.** ಪ್ರಾ.ಸಾ-6 ಭಗವಾನ್. ಡಿ ರವರು ತನಿಖಾಧಿಕಾರಿಯಾಗಿದ್ದು, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 14.07.2014 ರಂದು ಸಂಜೆ 6.35 ಗಂಟೆಗೆ ಚಾಸಾ-1 ರವರು ನೀಡಿದ ಲಿಖಿತ ದೂರನ್ನು Cr. 157/2014 ರಂತೆ ದಾಖಲಿಸಿಕೊಂಡು, ದಿನಾಂಕ 15.07.2014 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಟ್ಟು ಚಾಸಾ-1 ರವರು ತೋರಿಸಿದ ಜಾಗವನ್ನು ನೋಡಿ ಪಂಚಾಯ್ತಿದಾರರಾದ ಚಾಸಾ-5 ಮತ್ತು 6 ರವರ ಸಮಕ್ಷಮ ಮಹಜರ್ ಬರೆದಿರುತ್ತೇನೆ. ಮಹಜರ್ ಸಮಯದಲ್ಲಿ

KARN320024382014

ಸ್ಥಳದಲ್ಲಿದ್ದ ಕಬ್ಬಿಣದ ಹಾರೆಯನ್ನು ಚಾಸಾ-1 ರವರು ಹಾಜರು ಪಡಿಸಿದ ಮೇರೆಗೆ ಅಮಾನತ್ತು ಪಡಿಸಿಕೊಂಡಿರುತ್ತೇನೆ ಹಾಗೂ P.F. 70/2014 ರಲ್ಲಿ ನೋಂದಾಯಿಸಿಕೊಂಡಿರುತ್ತೇನೆ. ನಂತರ ಈ ಪ್ರಕರಣದ ಕಡತವನ್ನು ಚಾಸಾ-10 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಅವರು ತಮ್ಮ ಕಾರ್ಯ ವೈಖರಿಯ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ.

ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ,

*"... ದಿನಾಂಕ 12.07.2014 ರಂದು ದೂರು ದಾಖಲಿಸುವಾಗ ಚಾಸಾ-1 ರವರು ಗಲಾಟೆ ದಿನಾಂಕ 07.07.2014 ರಲ್ಲಿ ಆಗಿದೆ ಎಂದು, ಅಂದರೆ ದೂರು ದಾಖಲಿಸುವ 7 ದಿನಗಳ ಮುಂಚೆ ಆಗಿದೆ ಎಂದು ಮಾಹಿತಿ ನೀಡಿದ್ದಾರೆ. ಗ್ರಾಮದಲ್ಲಿ ರಾಜಿ ಸಂಧಾನ ಮಾಡಿಸುತ್ತೇವೆ ಎಂದು ಹೇಳಿದ ಕಾರಣದಿಂದ ತಡವಾಗಿ ಬಂದು ದೂರು ನೀಡುತ್ತಿದ್ದೇನೆ ಎಂದು ಮಾಹಿತಿ ನೀಡಿರುತ್ತಾರೆ. ರಾಜಿ ಮಾಡುತ್ತೇವೆಂದು ಹೇಳಿದ ಗ್ರಾಮಸ್ಥರ ಹೆಸರನ್ನು ಚಾಸಾ-1 ರವರು ಹೇಳಿಲ್ಲ. ದೂರಿನಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಚಾಸಾ-1 ರವರು ಹೇಳಿಲ್ಲ. U/s 324, 504, 506 IPC ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದೇನೆ. ಸೈಟ್ ಮತ್ತು ದಾರಿಯ ವಿಚಾರವಾಗಿ ಚಾಸಾ-1 ಮತ್ತು ಆರೋಪಿಯ ನಡುವೆ ವಿವಾದವಿದೆ ಎಂದು ಮಾಹಿತಿ ನೀಡಿದ್ದಾರೆ ಎಂದರೆ ಸರಿ. ಆರೋಪಿ ಚಾಸಾ-1 ರವರ ಜೊತೆ ಗಲಾಟೆ ಮಾಡಿಲ್ಲ, ಚಾಸಾ-1 ಮತ್ತು ಅವರ ಹೆಂಡತಿಗೆ ಅವಾಚ್ಯವಾಗಿ ಬೈದಿರುವುದಿಲ್ಲ, ಕೈಯಿಂದ ಮತ್ತು ಹಾರೆಯಿಂದ ಹಲ್ಲೆ ಮಾಡಿರುವುದಿಲ್ಲ. ನಾನು ಯಾವುದೇ*

KARN320024382014

*ಸತ್ಯಾಸತ್ಯತೆಯನ್ನು ಪರಿಶೀಲಿಸದೆ ಸುಳ್ಳು ದೂರನ್ನು ದಾಖಲಿಸಿಕೊಂಡಿದ್ದೇನೆ. ರಾಜಕೀಯ ದುರುದ್ದೇಶದಿಂದ ಆರೋಪಿಯ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎನ್ನುವುದನ್ನು ಅಲ್ಲಗಳೆದಿರುತ್ತಾರೆ. ...”*

**18.** ನ್ಯಾಯಾಲಯವು ಪ್ರಾಸಾ-1 ರಿಂದ ಪ್ರಾಸಾ-6 ರವರ ಸಾಕ್ಷ್ಯವನ್ನು ಪರಿಶೀಲಿಸಿ ಪರಿಗಣಿಸಿ ನೋಡಿದಾಗ ಆರೋಪಿಯ ವಿರುದ್ದ ಮಾಡಿದ ಆರೋಪಣೆಯನ್ನು ಸಾಬೀತು ಪಡಿಸಲು ಅಭಿಯೋಜನೆಯು ಸಂಪೂರ್ಣವಾಗಿ ವಿಫಲವಾಗಿರುವುದು ಕಂಡುಬರುತ್ತದೆ. ಅಭಿಯೋಜನೆಯು ಪ್ರಕರಣದ ಪ್ರಮುಖ ದೂರುದಾರರರು ಹಾಗೂ ಗಾಯಾಳು ಸಾಕ್ಷಿದಾರರಾದ ಚಾಸಾ-1 ರವರನ್ನು ಪ್ರಾಸಾ-1 ಎಂದು ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಯು ಹಲ್ಲೆ ಮಾಡಿರುವ ಬಗ್ಗೆ ಸವಿಸ್ತಾರವಾಗಿ ಸಾಕ್ಷ್ಯ ನುಡಿದಿದ್ದು, ಮುಖ್ಯ ವಿಚಾರಣೆಯಲ್ಲಿ ಗಮನಿಸಿದಾಗ ಸದರಿ ಸಾಕ್ಷಿ ಮತ್ತು ಆರೋಪಿಯು ಒಂದೇ ಊರಿನವರಾಗಿರುವುದು ಕಂಡು ಬಂದಿದ್ದು, ಸದರಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುವುದು ಕಂಡು ಬಂದಿರುತ್ತದೆ. ಆರೋಪಿ ಪರ ವಕೀಲರು ಪಾಟೀ ಸವಾಲಿಗೊಳಪಡಿಸಿದಾಗ ಆರೋಪಿಯು ಚಾಸಾ-2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಗಲಾಟೆ ಸಮಯದಲ್ಲಿ ಯಾವುದೇ ಆಯುಧದಿಂದ

ಹೊಡೆದಿರುವುದಿಲ್ಲ, ಜಮೀನಿನ ದಾರಿಯ ವಿಚಾರದಲ್ಲಿ ವೈಷಮ್ಯ ಇರುವುದಿಲ್ಲ ಎಂದು ಹೇಳಿರುತ್ತಾರೆ. ಮೇಲಾಗಿ ಪ್ರಾಸಾ-1, ಪ್ರಾಸಾ-2 ಮತ್ತು ಪ್ರಾಸಾ-4 ಒಂದೇ ಕುಟುಂಬದವರಾಗಿರುತ್ತಾರೆ. ಮುಂದುವರೆದು ಚಾಸಾ-2/ಪ್ರಾ.ಸಾ-2 ಮತ್ತು ಚಾಸಾ-3/ಪ್ರಾ.ಸಾ-3 ರವರು ಸಹ ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಸದರಿಯವರುಗಳು ಸಹ ಪ್ರಾ.ಸಾ-1 ರವರ ಸಾಕ್ಷ್ಯವನ್ನು ಭಾಗಶಃ ಪುನರುಚ್ಚರುತ್ತಾರೆ. ಈ ಪ್ರಕರಣದ ಮತ್ತೊಬ್ಬ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-6 ರವರನ್ನು ಪ್ರಾಸಾ-4 ಎಂದು ವಿಚಾರಣೆಗೊಳಪಡಿಸಿದಾಗ ಆರೋಪಿ ಕೃಷ್ಣನಾಯ್ಕ ಚಾಸಾ-1 ರವರಿಗೆ ಹಾರೆಯಿಂದ ತಲೆ ಮತ್ತು ಬಲಭುಜದ ಮೇಲೆ ಹೊಡೆದಿರುತ್ತಾರೆ ಎಂದು ಹೇಳಿದ್ದು, ಆರೋಪಿ ಪರ ವಕೀಲರು ಪಾಟೀಸವಾಲಿಗೊಳಪಡಿಸಿದಾಗ ಸಾಮಾನ್ಯವಾಗಿ ಹಳ್ಳಿಗಳಲ್ಲಿ ಹಾರೆಗಳು ಎಲ್ಲರ ಮನೆಯಲ್ಲೂ ಇರುತ್ತವೆ. ಪೊಲೀಸರು ಸ್ಥಳದಲ್ಲಿ ಯಾವುದೇ ಹಾರೆಯನ್ನು ಅಮಾನತುಪಡಿಸಿಕೊಂಡಿಲ್ಲ ಎಂಬ ವ್ಯತಿರಿಕ್ತ ಸಾಕ್ಷ್ಯವನ್ನು ನುಡಿದಿರುತ್ತಾರೆ. ಪ್ರಾಸಾ-5 ರವರು ಈ ಪ್ರಕರಣದಲ್ಲಿ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಈ ಹಂತದಲ್ಲಿ ಪ್ರಾಸಾ-1 ರಿಂದ ಪ್ರಾಸಾ-5 ರವರ ಸಾಕ್ಷ್ಯವನ್ನು ಯಾವುದೇ ಪೂರಕ ಸಾಕ್ಷಿ ಇಲ್ಲದೆ ನಂಬುವುದು ಕಷ್ಟಕರವಾಗಿರುತ್ತದೆ. ಹೀಗಾಗಿ ಪ್ರಾಸಾ-1 ರಿಂದ ಪ್ರಾಸಾ-5 ರವರ ಹೇಳಿಕೆಯ ಮೇರೆಗೆ ಸದರಿ ಪ್ರಕರಣವನ್ನು ಸಾಬೀತು

ಮಾಡುವುದರಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ. ಈ ಪ್ರಕರಣದ ತನಿಖಾಧಿಕಾರಿಯಾದ ಪ್ರಾಸಾ-6 ರವರು ತಮ್ಮ ಕಾರ್ಯ ವೈಖರಿಯ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ.

ಈ ಪ್ರಕರಣದ ದೋಷಾರೋಪಣಾ ಪಟ್ಟಿಯಲ್ಲಿ ಹೆಸರಿಸಲಾದ ಚಾಸಾ-7, ಚಾಸಾ-8 ಮತ್ತು ಚಾಸಾ-10 ರವರಿಗೆ ಸಾಕಷ್ಟು ಬಾರಿ ಸಮನ್ಸ್ ಹೊರಡಿಸಿದರೂ ನ್ಯಾಯಾಲಯಕ್ಕೆ ಹಾಜರಾಗದಿದ್ದ ಕಾರಣ ದಿನಾಂಕಃ 20.06.2026 ರಂದು ಈ ಪ್ರಕರಣದಿಂದ ಕೈಬಿಡಲಾಗಿರುತ್ತದೆ. ಇವರುಗಳಲ್ಲಿ ಚಾಸಾ-10 ರವರು ತನಿಖಾಧಿಕಾರಿಯಾಗಿದ್ದು, ತಮ್ಮ ಕಾರ್ಯವೈಖರಿಯನ್ನು ಮರೆತಿರುತ್ತಾರೆ. ಈ ಪ್ರಕರಣದಲ್ಲಿ ಪ್ರಮುಖವೆಂದು ಹೇಳಲಾದ ವ್ಯಕ್ತಿಗಳು ಆರೋಪಿಯ ವಿರುದ್ಧ ಯಾವುದೇ ಸಾಕ್ಷ್ಯವನ್ನು ನುಡಿದಿಲ್ಲವಾದ್ದರಿಂದ ಅಭಿಯೋಜನೆಯ ಈ ಪ್ರಕರಣದಲ್ಲಿ ಯಾವುದೇ ಹುರುಳು ಇಲ್ಲವೆಂದು ಸ್ಪಷ್ಟವಾಗಿ ಕಂಡು ಬರುತ್ತದೆ. ಆರೋಪಿಯ ವಿರುದ್ಧ ಹೊರಿಸಲಾದ ಆರೋಪಗಳು ಕೇವಲ ಆರೋಪಗಳಾಗಿಯೇ ಉಳಿಯುತ್ತವೆಯೇ ವಿನಃ ಯಾವುದೇ ಸಾಕ್ಷ್ಯಾಧಾರಗಳಿಂದ ರುಜುವಾತು ಆಗಿರುವುದಿಲ್ಲ.

ಆದ್ದರಿಂದ ಅಭಿಯೋಜನೆಯು ಆರೋಪಿಯ ವಿರುದ್ಧ ಆರೋಪಿಸಲಾದಂತಹ ಭಾರತೀಯ ದಂಡ ಸಂಹಿತೆಯ ಕಲಂ 506, 504, 326 ರ ಅಪರಾಧವನ್ನು ಆರೋಪಿಯು

ಮಾಡಿರುತ್ತಾರೆಂದು ರುಜುವಾತು ಪಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿದೆ ಹಾಗೂ ಅಭಿಯೋಜನೆಯು ತನ್ನೆಲ್ಲಾ ಸಂಶಯಾತೀತ ಕಾರಣಗಳಿಂದಾಗಿ ಆರೋಪಿಯ ಮೇಲಿನ ಅಪರಾಧವನ್ನು ರುಜುವಾತು ಪಡಿಸಬೇಕೆಂಬುದು ಕ್ರಿಮಿನಲ್ ನ್ಯಾಯಶಾಸ್ತ್ರದ ಸಾಮಾನ್ಯ ನಿಯಮವಾಗಿದ್ದು, ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿಯ ವಿರುದ್ಧದ ಆರೋಪಗಳನ್ನು ರುಜುವಾತು ಪಡಿಸುವಲ್ಲಿ ವಿಫಲವಾಗಿರುವುದರಿಂದ ಸಂಶಯದ ಲಾಭವನ್ನು ಆರೋಪಿಗೆ ಕೊಡಬೇಕಾಗಿರುವುದು ಸಾಮಾನ್ಯ ಕಾನೂನಿನ ತತ್ವವಾಗಿರುವುದರಿಂದ ಈ ಮೇಲಿನ ಅಂಶಗಳನ್ನು **ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

**19.** **ಅಂಶ-4 :** ಅಂಶ-1 ರಿಂದ 3 ರಲ್ಲಿ ಹೇಳಲಾದ ಕಾರಣಗಳಿಂದಾಗಿ, ಆರೋಪಿಯ ವಿರುದ್ದ ಹೊರಿಸಲಾದ ಆರೋಪಗಳನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತು ಪಡಿಸಲು ವಿಫಲರಾಗಿರುವ ಕಾರಣ ಆರೋಪಿಯನ್ನು ಬಿಡುಗಡೆಗೆ ಅರ್ಹರಿರುತ್ತಾರೆಂದು ಪರಿಗಣಿಸಿ, ಈ ಕೆಳಕಂಡಂತೆ ಆದೇಶ ಮಾಡುತ್ತೇನೆ.

KARN320024382014

## :<u>ಆದೇಶ</u> :

ದಂಡ ಪ್ರಕ್ರಿಯಾ ಸಂಹಿತೆ 248(1) ರಡಿಯಲ್ಲಿ ಆರೋಪಿಯನ್ನು ಭಾರತೀಯ ದಂಡ ಸಂಹಿತೆಯ ಕಲಂ 506, 504, 326 ರ ಆಪಾದನೆಗಳಿಂದ ದೋಷ ಮುಕ್ತಗೊಳಿಸಿ ಖುಲಾಸೆ ಮಾಡಲಾಗಿದೆ.

ಆರೋಪಿಯ ವೈಯುಕ್ತಿಕ ಬಂಧ ಪತ್ರ ಮತ್ತು ಜಾಮೀನುದಾರರ ಜಾಮೀನು ಮುಚ್ಚಳಿಕೆ ಪತ್ರಗಳನ್ನು ರದ್ದು ಪಡಿಸಲಾಗಿದೆ.

ಅಪೀಲು ಅವಧಿ ಮುಗಿದ ನಂತರ ಮುದ್ದೆಮಾಲು-1 ಕಬ್ಬಿಣದ ಹಾರೆಯನ್ನು ಸರ್ಕಾರದ ಪರವಾಗಿ ಮುಟ್ಟುಗೋಲು ಹಾಕಲು ಆದೇಶಿಸಿದೆ.

*(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, ನಂತರ ಮುಕ್ತ ನ್ಯಾಯಾಲಯದಲ್ಲಿ ದಿನಾಂಕ **29ನೇ ಜೂನ್ 2026** ರಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).*

**ಸಹಿ/-**

**(ವಿನಯ್.ವಿ. ಕುಂದಾಪುರ್)**

**2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಕನಕಪುರ.**

KARN320024382014

**::ಅನುಬಂಧ::**

**1.** <u>ಅಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ</u>

| | | |
|---|---|---|
| ಪ್ರಾಸಾ-1 | : | ಲಕ್ಷ್ಮಣ್ ನಾಯ್ಕ್ |
| ಪ್ರಾಸಾ -2 | : | ತುಳಚಿಬಾಯಿ |
| ಪ್ರಾಸಾ -3 | : | ಉಮೇಶ್ |
| ಪ್ರಾಸಾ -4 | : | ಮೋಹನ್ |
| ಪ್ರಾಸಾ -5 | : | ಕಿರಣ್ |
| ಪ್ರಾಸಾ -6 | : | ಭಗವಾನ್. ಡಿ |

**2.** <u>ಅಭಿಯೋಜನಾ ಪರ ಹಾಜರು ಪಡಿಸಿದ ದಾಖಲೆಗಳು:</u>

| | | |
|---|---|---|
| ನಿಶಾನೆ ಪಿ-1 | : | ದೂರು |
| ನಿಶಾನೆ ಪಿ-1(ಎ) | : | ಪ್ರಾಸಾ-1 ರವರ ಸಹಿ |
| ನಿಶಾನೆ ಪಿ-2 | : | ಮಹಜರ್ |
| ನಿಶಾನೆ ಪಿ-2(ಎ) | : | ಪ್ರಾಸಾ-4 ರವರ ಸಹಿ |
| ನಿಶಾನೆ ಪಿ-2(ಬಿ) | : | ಪ್ರಾಸಾ-6 ರವರ ಸಹಿ |
| ನಿಶಾನೆ ಪಿ-3 | : | ಪ್ರಾಸಾ-5 ರವರ ಹೇಳಿಕೆ |
| ನಿಶಾನೆ ಪಿ-4 | : | ಎಫ್. ಐ. ಆರ್ |

KARN320024382014

ನಿಶಾನೆ ಪಿ-4(ಎ) : ಪ್ರಾಸಾ-6 ರವರ ಸಹಿ

**3.** ಆರೋಪಿಯ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ

- ಇಲ್ಲಾ -

**4.** ಆರೋಪಿಯ ಪರ ಹಾಜರು ಪಡಿಸಿದ ದಾಖಲೆಗಳುಃ

- ಇಲ್ಲಾ -

**5.** ಸಾಕ್ಷಿ ಕಾಲಕ್ಕೆ ಗುರುತಿಸಲಾದ ಮುದ್ದೆಮಾಲುಗಳುಃ

ಮುದ್ದೆಮಾಲು 1 : ಒಂದು ಕಬ್ಬಿಣದ ಹಾರೆ

**ಸಹಿ/-**

**(ವಿನಯ್.ವಿ. ಕುಂದಾಪುರ್)**

**2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಕನಕಪುರ.**

KARN320024382014

KARN320024382014

Judgment not ready
Call on: 29.06.2026

**2ನೇ ಅಪರ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಕನಕಪುರ.**

(ಮುಕ್ತ ನ್ಯಾಯಾಲಯದಲ್ಲಿ ತೀರ್ಪನ್ನು ಪ್ರಕಟಿಸಲಾಗಿದೆ ಪ್ರತ್ಯೇಕ ಆದೇಶದ ಹಾಳೆಯನ್ನು ವೀಕ್ಷಿಸಿ)

**: ಆದೇಶ :**

ದಂಡ ಪ್ರಕ್ರಿಯಾ ಸಂಹಿತೆ 248(1) ರಡಿಯಲ್ಲಿ ಆರೋಪಿಯು ಭಾರತೀಯ ದಂಡ ಸಂಹಿತೆಯ ಕಲಂ 506, 504, 326 ರ ಆಪಾದನೆಗಳಿಂದ ದೋಷ ಮುಕ್ತಗೊಳಿಸಿ ಖುಲಾಸೆ ಮಾಡಲಾಗಿದೆ.

ಆರೋಪಿಯ ವೈಯುಕ್ತಿಕ ಬಂಧ ಪತ್ರ ಮತ್ತು ಜಾಮೀನುದಾರರ ಜಾಮೀನು ಮುಚ್ಚಳಿಕೆ ಪತ್ರಗಳನ್ನು ರದ್ದು ಪಡಿಸಲಾಗಿದೆ.

ಅಪೀಲು ಅವಧಿ ಮುಗಿದ ನಂತರ ಮುದ್ದೆಮಾಲು-1 ಕಬ್ಬಿಣದ ಹಾರೆಯನ್ನು ಸರ್ಕಾರದ ಪರವಾಗಿ ಮುಟ್ಟುಗೋಲು ಹಾಕಲು ಆದೇಶಿಸಿದೆ.

KARN320024382014

**2ನೇ ಅಪರ ಸಿವಿಲ್ ಜಡ್ಜ್**
**ಮತ್ತು ಜೆ.ಎಂ.ಎಫ್.ಸಿ., ಕನಕಪುರ.**

KARN320024382014